ಸುಂದರಿಯೂ ಆದ ಗಂಗಕ್ಕೆಯನ್ನು ಕಂಡು ಅವಳ ಮೇಲೆ ಒಬ್ಬೊಬ್ಬರಾಗಿ ಅತ್ಯಾಚಾರ ಎಸಗುತ್ತಾರೆ. ಸ್ಮೃತಿಯಿಲ್ಲದೆ ಬಿದ್ದಿದ್ದ ಅವಳನ್ನು ಆ ಮೇಲೆ ಮನೆಗೆ ಒಯ್ದು ಬದುಕಿಸಿಕೊಂಡರೂ ಈ ಅತ್ಯಾಚಾರದ ವಿಷಯವನ್ನು ಅವಳು ಯಾರಲ್ಲಿಯೂ ಬಾಯಿಬಿಡುವುದಿಲ್ಲ. ಅತ್ಯಾಚಾರದ ಫಲವಾಗಿ ಅವಳಿಗೆ ಬಿಳಿಯ ಬಣ್ಣದ, ಕೆಂಪುಕೂದಲು ಮತ್ತು ಬಣ್ಣದ ಕಣ್ಣುಗಳ ದಷ್ಟಪುಷ್ಟ ಮಗುವೊಂದು ಜನಿಸುತ್ತದೆ. ಅದೇ ಈ ಕಾದಂಬರಿಯ ಮುಖ್ಯ ಪಾತ್ರವಾದ ಸಿದ್ಧಣ್ಣ ಸೆಟ್ಟಿ. ಈ ಮಗುವು 'ದೈವಾಂಶ ಸಂಭೂತ'ನೆಂದು ಜ್ಯೋತಿಷಿಗಳು ಹೇಳುತ್ತಾರೆ. ಬೆಳೆದಾಗ ಬಿಳಿ ಬಣ್ಣದ್ದಾಗಿ, ದಷ್ಟಪುಷ್ಟವಾಗಿದ್ದುದರಿಂದ ಎಲ್ಲರ ನಡುವೆ ಎದ್ದುಕಾಣುವ ವ್ಯಕ್ತಿತ್ವ ಅವನದಾಗುತ್ತದೆ. ಗುತ್ತಿನ ಮನೆಯ ಯುವಕನಾದುದರಿಂದ ಗಣ್ಯತ್ವ ಅದರಷ್ಟಕ್ಕೆ ಪ್ರಾಪ್ತಿಯಾಗುತ್ತದೆ. ಆದರೆ ಇವನ ಕುತಂತ್ರ ಬುದ್ಧಿ, ದುಷ್ಟತನಗಳಿಂದ ಯಾರೂ ಎದುರಿಸಲಾಗದ ದೊಡ್ಡ ವ್ಯಕ್ತಿಯಾಗಿ ಸಮಾಜದಲ್ಲಿ ಸ್ಥಾಪಿತನಾಗುತ್ತಾನೆ. ಕೊನೆಗೆ ಅವನಿಂದ ವಂಚನೆಗೊಳಗಾದ ಯುವಕನೊಬ್ಬ ಅವನಿಗೆ ತಿರುಗಿಬಿದ್ದು ಅವನನ್ನು ಕೊಲೆಗೈಯುವುದರೊಂದಿಗೆ ಕಾದಂಬರಿ ಮುಗಿಯುತ್ತದೆ.

ಅವಿಭಜಿತ ದಕ್ಷಿಣಕನ್ನಡದ ಕೆಲವು ನಿಜವಾದ ಹೆಸರಿನ ಊರುಗಳಲ್ಲಿ ಈ ಕಾದಂಬರಿಯ ಕಥೆ ನಡೆಯುತ್ತದೆ. ಇಲ್ಲಿ ಉಲ್ಲೇಖವಾಗಿರುವ ಊರುಗಳೆಂದರೆ ವೇಣೂರು, ಮಿಯಾರು (ಕಾರ್ಕಳದ ಸಮೀಪದ ಊರು), ಕಿನ್ನಿಗೋಳಿ, ಮೂಡುಬಿದ್ರಿ, ಹೊಸಂಗಡಿ, ಮಂಗಳೂರು, ಕಾಸರಗೋಡು ಇತ್ಯಾದಿ. ಕಥೆ ನಡೆಯುವ ಕಾಲಾವಧಿ 1917 ರಿಂದ ಸುಮಾರು 1955. ಇದು ಕಥಾನಕದ ಮುಖ್ಯ ಪಾತ್ರವಾದ ಸಿದ್ಧಣ್ಣನ ಜನನದಿಂದ ಸಾವಿನವರೆಗಿನ ಅವಧಿಯಾಗಿದೆ.

ಕಾದಂಬರಿಯಲ್ಲಿ ಎರಡು ಸಂಸಾರಗಳ ಕಥಾನಕವಿದೆ. ಮೊದಲನೆಯದು ಪ್ರಧಾನ ಧಾರೆಯ ಕಥಾನಕದ ಸಿದ್ಧಣ್ಣ ಸೆಟ್ಟಿಯ ಕಥೆ. ಇದರಲ್ಲಿ ಜಮೀನುದಾರೀ-ಪಾಳೆಯಗಾರಿಕೆಯ ಎರಡು ತಲೆಮಾರುಗಳನ್ನು ಪ್ರತಿನಿಧಿಸುವ ವೇಣೂರಿನ ಬಿಚ್ಚೂರುಗುತ್ತು ಬಾಳಪ್ಪ ಸೆಟ್ಟಿಯವರು ಮತ್ತು ಅವರ ಅಳಿಯ ಸಿದ್ಧಣ್ಣ ಸೆಟ್ಟಿಯವರ ಗ್ರಾಮಾಳ್ವಿಕೆಯ ಚಿತ್ರಣವಿದೆ. ಗಂಗಕ್ಕೆಯ ತಮ್ಮ ಬಾಳಪ್ಪ ಸೆಟ್ಟಿಯವರು ತಮ್ಮ ಕಾಲದಲ್ಲಿ ತಮ್ಮ ಆಸ್ತಿಪಾಸ್ತಿಗಳನ್ನು ವರ್ಧಿಸಿಕೊಂಡು ತಮ್ಮ ಮನೆಯನ್ನು 'ಬಿಚ್ಚೂರು ಗುತ್ತು' ಎಂದು ಕರೆದುಕೊಂಡವರು.




ತುಳುವರು ಅಳಿಯಸಂತಾನ ಕುಟುಂಬ ವ್ಯವಸ್ಥೆಯನ್ನು ಅನುಸರಿಸುವುದರಿಂದ ಸಿದ್ಧಣ್ಣ ತನ್ನ ತಂದೆ ದೇಜಪ್ಪ ಸೆಟ್ಟಿಯ ಊರಾದ ಸಾಂತೂರಿನಲ್ಲಿ ನೆಲೆಸದೆ ತಾಯಿಯ ತವರಾದ ಬಿಚ್ಚೂರುಗುತ್ತಿನಲ್ಲಿ ಮಾವನ ಜತೆಗೆ ಬೆಳೆದು, ಮಾವನಂತೆಯೇ ಕಾರುಬಾರಿ ಮನುಷ್ಯನಾದನು. ಅವನೇ ಕಾದಂಬರಿಯ ನಾಯಕ ಮತ್ತು ಖಳನಾಯಕ ಎನ್ನುವುದು ವಿಶೇಷ. ಬಾಳಪ್ಪ ಸೆಟ್ಟಿಯದು ಭಾರತೀಯ ಪ್ರಭುತ್ವವಾದರೆ ಸಿದ್ಧಣ್ಣನದು ವಸಾಹತುಶಾಹಿ ಆಳ್ವಿಕೆಯ ಹಾಗಿದೆ.

ಬಾಳಪ್ಪ ಸೆಟ್ಟಿಯವರಿಗೆ ಒಕ್ಕಲಿನವರ ಸುಂದರಿಯರಾದ ವಿವಾಹಿತ ಯುವತಿಯರು, ಗಂಡಂದಿರ ಕಣ್ಣುತಪ್ಪಿಸಿ 'ಇಟ್ಟುಕೊಂಡವರಾಗಿ' ಸಹಕರಿಸಬೇಕಾಗಿತ್ತು. ಅವರಲ್ಲಿ ನರ್ಸಿ ಎಂಬವಳು ಬಹಳ ರೂಪವತಿಯಾದುದರಿಂದ ಇಪ್ಪತ್ತರ ಆಸುಪಾಸಿನ ಸಿದ್ಧಣ್ಣನೂ ಅವಳ ಸಂಪರ್ಕಕ್ಕೆ ಪ್ರಯತ್ನಿಸುತ್ತಾನೆ. ಕೆಲವು ಕಾಲದ ನಂತರ, ಅದರಲ್ಲಿಯೂ ಬಾಳಪ್ಪ ಸೆಟ್ಟಿಯವರ ಮರಣಾನಂತರ ನರ್ಸಿ ಅವನ ಪ್ರೇಯಸಿಯಾಗುತ್ತಾಳೆ. ಅವನು ಇತರ ಹಲವು ವಿವಾಹಿತ, ಅವಿವಾಹಿತ ಹೆಂಗಸರನ್ನು ತನ್ನ ಲೈಂಗಿಕ ಬಯಕೆಯನ್ನು ತಣಿಸಲು ಬಳಸಿಕೊಳ್ಳುತ್ತಾನೆ. ಅವಳಲ್ಲಿ ಒಬ್ಬಳು ಅವನ ಸೋದರಮಾವನ ಹೆಂಡತಿ ಗುಬ್ಬಕ್ಕೆ. ಮಕ್ಕಳಿಲ್ಲದ ಮಾವನ ಹೆಂಡತಿ ಗುಬ್ಬಕ್ಕೆ ಮಾವನಿಗಿಂತ ಹದಿನೈದು